ಹರಿಜನ ಮತ್ತು ಗಿರಿಜನ ಮಕ್ಕಳು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ನೀವು ಒಂದು ಷರತ್ತು ಹಾಕಿದ್ದೀರಿ, ಅದೇನೆಂದರೆ ಅವರು 10-20 ಸಾವಿರ ರೂಪಾಯಿಗಳು ಡಿಪಾಸಿಟ್ ಮಾಡಬೇಕೆಂದು. ಆ 10-20 ಸಾವಿರ ರೂಪಾಯಿಗಳ ಡಿಪಾಸಿಟ್ ಹಣ ಆ ಬಡಮಕ್ಕಳಿಗೆ ಕೊಡಲು ಸಾಧ್ಯವಾಗುವುದಿದ್ದಿಲ್ಲ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫೈನಾನ್ಸ್ ಕಾರ್ಪೊರೇಷನ್ ಮುಖಾಂತರ ಧನಸಹಾಯ ಮಾಡಿದರೆ ಖಂಡಿತವಾಗಿ ಉಪಕಾರವಾಗುತ್ತದೆ. ಅದೇ ಸಂದರ್ಭದಲ್ಲಿ ನಾನು ಮಾನ್ಯ ಸಚಿವರ ಗಮನಕ್ಕೆ ಮತ್ತೊಂದು ವಿಷಯ ತರುವುದೇನೆಂದರೆ ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ನರಭಕ್ಷಕರು ಇದ್ದಾರೆ. ಅವರು ಒಂದೊಂದು ಲೈಸೆನ್ಸ್‌ಗೆ 20 ಸಾವಿರ ರೂಪಾಯಿಗಳಿಂದ 80 ಸಾವಿರ ರೂಪಾಯಿಗಳವರೆಗೂ ಡಿಮ್ಯಾಂಡ್ ಮಾಡುತ್ತಾರೆ. ಒಂದು ಲೈಸೆನ್ಸ್ ಕೊಡಬೇಕಾದರೆ ಅದಕ್ಕೆ ತಾವು ಒಂದು ಕಟ್ಟುನಿಟ್ಟಾದ ಆದೇಶ ಹೊರಡಿಸಬೇಕು. ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ತನಿಕೆ ನಡೆಸಿ ಆ ಬಡವರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು. 18 ಪರ್‌ಸೆಂಟ್ ಖೋಟಾದಲ್ಲಿ ಇದುವರೆಗೂ ಕೊಟ್ಟಿರುವ 80 ಜನರಲ್ಲಿ ಒಬ್ಬರಿಗೆ ಕೊಟ್ಟಿದ್ದೀರಿ ಅಂದರೆ 18 ಪರ್‌ಸೆಂಟ್ ತುಂಬಲು ಸೂಕ್ತ ಕ್ರಮ ತೆಗೆದುಕೊಂಡಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಬಂದಂತಹ ಅನೇಕ ರೀತಿಯ ಒತ್ತಡಗಳನ್ನು ಗಮನಿಸಿ ಸರ್ಕಾರ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಆದರಲ್ಲೂ ನಿರುದ್ಯೋಗಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಶೇಕಡ 20ರಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಅವರಿಗೆ ಮೀಸಲಾಗಿಡ ಬೇಕೆಂದು ಸುತ್ತೋಲೆಯನ್ನು ದಿನಾಂಕ 19-3-91ರಲ್ಲಿ ಹೊರಡಿಸಿದ್ದೇವೆ. ಆ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಎಚ್ಚರಿಕೆ ನೀಡಲಾಗಿದೆ. ತಾವು ಒಂದೊಂದು ಲೈಸೆನ್ಸ್ ಕೊಡಲಿಕ್ಕೆ ಇಂತಿಷ್ಟು ಹಣ ಬೇಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ನಿರ್ದಿಷ್ಟವಾಗಿ ಇರುವ ವಿಚಾರ ಹೇಳುವುದಾದರೆ, ನಮ್ಮ ಕನಸಿನಲ್ಲೂ ಅಂತ ಅಧಿಕಾರಿಗಳನ್ನು ನಾವು ಇಟ್ಟುಕೊಳ್ಳುವುದಕ್ಕೆ ತಯಾರಾಗಿಲ್ಲ. ನಿರ್ದಿಷ್ಟವಾಗಿ ತಾವು ಯಾರ ಬಗ್ಗೆಯಾದರೂ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆ. ನಾವು ಮೊದಲನೆಯದಾಗಿ ಈ ವರ್ಗದವರಿಗೆ ಸಾಮಾಜಿಕ ನ್ಯಾಯ ಕೊಡಬೇಕೆನ್ನುವ ನಿಲುವು ತೆಗೆದುಕೊಂಡಿದ್ದೇವೆ, ಹಾಗೂ ಮುಂದಿನ ಸಾಲಿನಲ್ಲಿ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆ.

ಶ್ರೀ ಆಂಜನಮೂರ್ತಿ:- ಇದರ ಬಗ್ಗೆ ತಾವು ಸುತ್ತೋಲೆ ಕಳುಹಿಸಿ 20 ಪರ್‌ಸೆಂಟ್ ಮಾಡಲಿಕ್ಕೆ ಹೊರಟಿರುವುದು ಸಂತೋಷ. ಆದರೆ ನನ್ನ ಇನ್ನೊಂದು ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲ್ಲಿಲ್ಲ. ಅದೇನೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಇದುವ ಫೈನಾನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ವತಿಯಿಂದ ಇವರಿಗೆ ಧನಸಹಾಯ ಮಾಡಿ ಅವರು ಡಿಫಾಸಿಟ್ ಮಾಡಿದರೆ ಲೈಸೆನ್ಸ್ ತೆಗೆದುಕೊಂಡು ಜೀವನ ಮಾಡಲಿಕ್ಕೆ ಸಹಾಯವಾಗುತ್ತದೆ. ಇದರ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಆಹಾರ ಇಲಾಖೆಯಲ್ಲಿ ಮಾತ್ರ ನ್ಯಾಯಬೆಲೆ ಅಂಗಡಿಗಳನ್ನು ಕೊಡುವ ಅಧಿಕಾರ ಇದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಹಣಕಾಸು ಸಾಲ ಕೊಡಿಸಬೇಕು ಎಂದು ಏನು ಹೇಳಿದರು ಅದಕ್ಕೆ ಬೇರೆ ನನ್ನ ಸ್ನೇಹಿತ ಮಂತ್ರಿಗಳು ಇದ್ದಾರೆ. ಈ ಪ್ರಶ್ನೆಯನ್ನು ತಾವು ಅವರಲ್ಲಿ ಕೇಳಬಹುದು.

ವಿಷಯ:- ಶಾಂತಿನಗರ ಕ್ಷೇತ್ರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 422 (2125)

ಶ್ರೀ ಎಮ್. ಮುನಿಸ್ವಾಮಿ (ಶಾಂತಿನಗರ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಶಾಂತಿನಗರ ಕ್ಷೇತ್ರದ ಈ ಕೆಳಕಂಡ ಪ್ರದೇಶಗಳಿಗೆ ಎಂದರೆ ಈಜಿಪುರ, ನೀಲಸಂದ್ರ, ಆಸ್ಟೀನ್ ಟೌನ್, ಬಿ. ಡಿ. ಎ ಪ್ರದೇಶ ಮುಂತಾದವುಗಳಿಗೆ ಒಟ್ಟು ಎಷ್ಟು ವಿದ್ಯುಚ್ಛಕ್ತಿಯನ್ನು ಹಂಚಲಾಗುತ್ತಿದೆ?.

ಆ. ಪ್ರತಿ 3 ತಾಸಿಗೊಮ್ಮೆ ವಿದ್ಯುಚ್ಛಕ್ತಿ ಅಡಚಣೆಯಿರುವುದು ಮತ್ತು ವಿದ್ಯುಚ್ಛಕ್ತಿ ಇದ್ದರೂ ಸಹ ಕಡಿಮೆ ವೋಲ್ಟೇಜಿನಿಂದ ಬಹಳ ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ವಿದ್ಯುಚ್ಛಕ್ತಿಯಲ್ಲಿನ ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ ತರಲು ಅಥವಾ ಪರಿವರ್ತಕವನ್ನು ಸ್ಥಾಪಿಸಿ ವಿದ್ಯುಚ್ಛಕ್ತಿ ಸರಬರಾಜನ್ನು ಸರಿ ಪಡಿಸಲು ಸಂಬಂಧ ಪಟ್ಟವರು ಯಾವುದೇ ಸೂಕ್ತ ಕ್ರಮ ಕೈಗೊಂಡಿದ್ದಾರೆಯೇ?

ಶ್ರೀ ಎಂ. ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು)

ಅ. ಈ ಎಲ್ಲಾ ಪ್ರದೇಶಗಳಿಗೆ ಆಸ್ಟೀನ್ ಟೌನ್‌ನಲ್ಲಿರುವ 66:11 ಕೆ. ವಿ. ಉಪ ವಿದ್ಯುತ್ ಕೇಂದ್ರದ 30 ಎಂ. ವಿ. ಎ. ಸಾಮರ್ಥ್ಯದ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.

ಆ. ಬಂದಿದೆ.

ಇ. ವಿದ್ಯುಚ್ಛಕ್ತಿಯಲ್ಲಿನ ಅಡಚಣೆ ಮತ್ತು ಕಡಿಮೆ ವೋಲ್ಟೇಚ್‌ನ ತೊಂದರೆಯು 10 ಎಂ. ವಿ. ಎ. ಸಾಮರ್ಥ್ಯದ ಪರಿವರ್ತಕ ವಿಫಲತೆಯು ಮುಖ್ಯ ಕಾರಣವಾಗಿದೆ. ಕಾರ್ಯ ವಿಫಲಗೊಂಡ 10 ಎಂ. ವಿ. ಎ. ಪರಿವರ್ತಕ ಬದಲಿಗೆ 20 ಎಂ. ವಿ. ಎ. ಸಾಮರ್ಥ್ಯದ ಕಾರ್ಯ ಭರದಿಂದ ಸಾಗಿದೆ. ಈ ಪರಿವರ್ತಕವನ್ನು ಚಾಲನೆಗೊಳಿಸಿದ ನಂತರ ವಿದ್ಯುಚ್ಛಕ್ತಿಯಲ್ಲಿನ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರುಕಳಿಸುತ್ತದೆ.

ಶ್ರೀ ಎಮ್. ಮುನಿಸ್ವಾಮಿ:- ಮಾನ್ಯ ಅಧ್ಯಕ್ಷರೇ, ಉತ್ತರ ಏನೋ ಒದಗಿಸಿದ್ದಾರೆ. ಆದರೆ, ಇಲ್ಲಿ ಹೇಳಿರತಕ್ಕಂಥ ಉತ್ತರದಲ್ಲಿ, ಜನ ಪಡತಕ್ಕಂತ ಕಷ್ಟ ನಿಮಗೂ ಗೊತ್ತಿದೆ. ಸುಮಾರು 3 ತಿಂಗಳಾಯಿತು, ದಿನ ಬೆಳಿಗ್ಗೆಯಿಂದ ಸಾಯಂಕಾಲದ ಒಳಗೆ 4 ಸಾರ್ತಿ ಕರೆಂಟ್ ಹೊರಟುಹೋಗುತ್ತದೆ. ಸಾಯಂಕಾಲ 6ರಿಂದ 9 ಗಂಟೆಯವರೆಗೆ ವಿದ್ಯುಚ್ಛಕ್ತಿ ಬರುವುದಿಲ್ಲ. ಸುಮಾರು ಅಧಿಕಾರಿಗಳ ಹತ್ತಿರ ಸಂಪರ್ಕ ಮಾಡಿ ಹೇಳಿದರೂ ಇದೇ ಕಥೆ ನಡೆಯುತ್ತಿದೆ. ಇನ್ನೊಂದು ಏನಾಗುತ್ತಿದೆ ಅಂದರೆ ಈಜಿಪುರ, ಆಸ್ಟಿನ್ ಟೌನ್, ಸೊಣ್ಣೇನ ಹಳ್ಳಿ, ವಿವೇಕನಗರ, ಬಿ. ಡಿ. ಎ. ಫ್ಲಾಟ್‌ಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಮಕ್ಕಳು ಓದುತ್ತಿರುತ್ತಾರೆ. ಇಷ್ಟೊಂದು ಕಂಪ್ಲೇಂಟ್ ಆದರೂ ಇನ್ನೂವರೆಗೆ ಸರಿಪಡಿಸದ್ದಿದ್ದರೆ ಓದುವ ಮಕ್ಕಳ ಗತಿ ಏನಾಗುತ್ತದೆ? ಮನೆಯಲ್ಲಿರತಕ್ಕಂಥ ಹೆಂಗಸರ ಗತಿ ಏನಾಗುತ್ತದೆ ಸ್ವಾಮಿ? ಅಡಿಗೆ ಮಾಡುವುದಕ್ಕೆ ವಿದ್ಯುಚ್ಛಕ್ತಿ ಇಲ್ಲ. ಓದುವುದಕ್ಕೆ ವಿದ್ಯುಚ್ಛಕ್ತಿ ಇಲ್ಲದಿದ್ದರೆ ಓದತಕ್ಕಂಥ ಮಕ್ಕಳು ಯಾವ ರೀತಿ ವಿದ್ಯಾಭ್ಯಾಸ ಮಾಡುಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಯವರಿಗೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ:- ಸ್ವಾಮಿ, ಅಲ್ಲಿ ಒಂದು ಟ್ರಾನ್ಸ್‌ಫಾರ್ಮರ್ 10ಕೆ. ವಿ. ಯದು ಕೆಟ್ಟುಹೋಗಿದೆ. ಅದರ ಬದಲು 20 ಕೆ.ವಿ.ಎ. ಯದು ಇಷ್ಟರಲ್ಲೇ ಹಾಕಿಸಿಕೊಡುತ್ತೇವೆ. ಒಂದು ಹೊಸ ಸ್ಟೇಷನ್ ಮಾಡಿಸುತ್ತೇವೆ. ಇನ್ನು 3 ತಿಂಗಳಲ್ಲಿ ಒಳ್ಳೆಯ ರೀತಿಯಲ್ಲಿ ಮಾಡಿಸಿ ಕೊಡುತ್ತೇನೆಂದು ನಾನು ಹೇಳುತ್ತೇನೆ.

ಶ್ರೀ ಎಮ್. ಮುನಿಸ್ವಾಮಿ:- ಇದೇ ರೀತಿ ಅಧಿಕಾರಿಗಳು 3 ತಿಂಗಳಿನಿಂದ ಹೇಳುತ್ತಾ ಬಂದಿದ್ದಾರೆ. ರಾತ್ರಿ ಕತ್ತಲಾದಾಗ ಕಳ್ಳತನ ನಡೆಯುತ್ತಿದೆ.

ಶ್ರೀ ಎಂ. ರಾಮಪ್ಪ:- ಇದನ್ನು ವರ್ಲ್ಡ್ ಬ್ಯಾಂಕ್‌ನಿಂದ ಮಾಡುತ್ತಿದ್ದೇವೆ.

ಶ್ರೀ ಎಮ್. ಮುನಿಸ್ವಾಮಿ:- ಮಕ್ಕಳ ವಿದ್ಯಾಭ್ಯಾಸ ಹಾಳಾಗುತ್ತಿದೆ.

ಶ್ರೀ ಎಂ. ರಾಮಪ್ಪ:- ಹೊಸ ಸ್ಟೇಷನ್ ಕೂಡಾ ಒಂದು ಮಾಡಿಕೊಡುತ್ತಿದ್ದೇವೆ

ಶ್ರೀ ಎಮ್. ಮುನಿಸ್ವಾಮಿ:- ಯಾವಾಗ ಮಾಡುವುದು ಸ್ವಾಮಿ?

ಶ್ರಿ ಎಂ. ರಾಮಪ್ಪ:- ಇನ್ನು ಮೂರು ತಿಂಗಳಲ್ಲಿ ಮಾಡಿಕೊಡುತ್ತಿದ್ದೇವೆ.

ಶ್ರಿ ರಾಮಲಿಂಗ ರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, ಬೇಳಿಗ್ಗೆ ಆರೂವರೆಯಿಂದ ಬೆಳಿಗ್ಗೆ ಒಂಭತ್ತೂವರೆಯವರೆಗೆ ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ಇರುವುದಿಲ್ಲ. ನಿನ್ನೆ ಪತ್ರಿಕೆಗಳಲ್ಲಿ ಓದಿದೆ. ಒಂದು ಗಂಟೆ ಮಾತ್ರ ವಿದ್ಯುತ್ 3 ನಗರದಲ್ಲಿ ಇರುವುದಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿದೆ. ಅದಕ್ಕೆ ಸ್ಪಷ್ಟನೆ ನೀಡಬೇಕೆಂದು ಕೇಳುತ್ತೇನೆ.

ಶ್ರಿ ಎಂ. ರಾಮಪ್ಪ:- ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರಿ ರಾಮಲಿಂಗ ರೆಡ್ಡಿ:- ಏನು ಸ್ವಾಮಿ ನೀವು ಹೇಳುವುದು? ಪ್ರತಿಯೊಬ್ಬ ನಾಗರೀಕನಿಗೆ ಸಂಬಂಧಪಟ್ಟದ್ದು ಇದು. ಇದರ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೇನೆ. ಅದಕ್ಕೆ ನನಗೆ ಅವಕಾಶ ಕೊಡಲ್ಲಿಲ್ಲ. ಮಂತ್ರಿಗಳು ಈ ತರಹ ಹೇಳಿದರೆ ಹೇಗೆ? ಬೆಳಿಗ್ಗೆ ಆರೂವರೆಯಿಂದ ಒಂಭತ್ತೂವರೆಯವರೆಗೆ ವಿದ್ಯುತ್ ಇರುವುದಿಲ್ಲವೆಂದರೆ ಏನರ್ಥ?

ಶ್ರಿ ಪೆರಿಕಲ್ ಮಲ್ಲಪ್ಪ:- ಸಭಾಧ್ಯಕ್ಷರೇ, ಇದು ಬೆಂಗಳೂರು ನಗರಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆ. ಏಕೆಂದರೆ, ಬೆಂಗಳೂರಿನಲ್ಲಿ ಎಲೆಕ್ಟ್ರಿಸಿಟಿ ಯಾವಾಗ ಹೋಗುತ್ತದೆ ಯಾವಾಗ ಬರುತ್ತದೆಂದು ಒಬ್ಬರಿಗೂ ಗೊತ್ತಿಲ್ಲ. ಯಾವಾಗ ಎಕ್ಸಿಕ್ಯುಟೀವ್ ಇಂಜಿನೀಯರ್‌ಗೆ ಫೋನ್ ಮಾಡಿ ಕೇಳಿದರೂ, ಚೀಫ್ ಇಂಜಿನೀಯರ್‌ರವರನ್ನು ಕೇಳಿದರೂ ಟ್ರಾನ್ಸ್‌ಫಾರ್ಮರ್ ಸರಿಯಾಗಿಲ್ಲವೆಂದು ಹೇಳುತ್ತಾರೆ. ಸರಿಯಾದ ಟ್ರಾನ್ಸ್‌ಫಾರ್ಮರ್ ಹಾಕದ್ದಿದ್ದರೆ ಹೇಗೆ? ಎಲೆಕ್ಟ್ರಿಸಿಟಿ ಚಾರ್ಜಸ್ ಮಾತ್ರ ಕರೆಕ್ಟ್ ಆಗಿ ತಿಂಗಳು ತಿಂಗಳಿಗೂ ತೆಗೆದುಕೊಳ್ಳುತ್ತಾರೆ. ಒಂದು ದಿವಸ ಲೇಟ್ ಆದರೂ ಡಿಸ್‌ಕನಕ್ಟ್ ಮಾಡುತ್ತಾರೆ. ಆದರೆ, ಯಾವುದೇ ಟೈಮ್ ಕೊಡಲಿ, ಒಂದು ನಿಗದಿತ ಟೈಮ್, ಒಂದು ಫಿಕ್ಸೆಡ್ ಟೈಮ್‌ನಲ್ಲಿ ಸ್ವಿಚ್ಟ್ ಆಫ್ ಮಾಡುತ್ತೇವೆಂದು ಹೇಳಲಿ. ಏಕೆಂದರೆ ಬೆಂಗಳೂರಿನಲ್ಲಿ ಬಹಳಷ್ಟು ಪವರ್ ಲೂಮ್ಸ್ ಇದ್ದಾವೆ, ಕಾರ್ಖಾನೆಗಳು ಇದ್ದಾವೆ, ಸಣ್ಣ ಕಾರ್ಖಾನೆಗಳು ಬೆಂಗಳೂರು ನಗರದಲ್ಲಿ ಇದ್ದಾವೆ. ಯಾವುದೆ ಒಂದು ಟೈಮ್ ನಿಗದಿ ಮಾಡಬೇಕು. ಬೆಳಿಗ್ಗೆ ಇಷ್ಟು ಗಂಟೆಯಿಂದ ಇಷ್ಟು ಗಂಟೆಯವರೆಗೆ ಎಲೆಕ್ಟ್ರಿಸಿಟಿ ಕೊಡುವುದಿಲ್ಲ, ಸಾಯಂಕಾಲ ಇಷ್ಟು ಗಂಟೆಯವರೆಗೆ ಆಫ್ ಮಾಡುತ್ತೇವೆಂದು, ಇವರು ಸಮಯ ಮಾಡುವುದಕ್ಕೆ ಏನು ಕಷ್ಟ ಇದೆ? ಇವರಿಗೆ ಇಷ್ಟ ಬಂದಾಗ ಸ್ವಿಚ್ ಹತ್ತಿರ ಕೂತುಕೊಂಡು ಸ್ವಿಚ್ಚಿಂಗ್ ಸ್ಟೇಷನ್‌ನಲ್ಲಿ ಆಫ್ ಮಾಡಿಬಿಟ್ಟರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಇದಕ್ಕೆ ಏನಾದರೂ ಒಂದು ಆದೇಶ ಕೊಡುತ್ತಾರೋ ಹೇಗೆ? ಇದು ತಮಗೆ ಗೊತ್ತಿದೆಯೋ ಇಲ್ಲವೋ, ಬೆಂಗಳೂರು ನಗರದಲ್ಲಿ ಈ ತರಹ ಪತಕ್ಕೆ ಆಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರಿ ಎಂ. ರಾಮಪ್ಪ:- ಸ್ವಾಮಿ ಇದು ನನಗೆ ಸ್ಪೆಸಿಫಿಕ್ ಆಗಿ ಏನೂ ಅರ್ಥ ಆಗಲಿಲ್ಲ. ಏಕೆಂದರೆ, ಎಲ್ಲೆಲ್ಲಿಯಾವಾಗ ವಿದ್ಯುತ್ ಹೋಗಿದೆ ಎಂದು ಕಂಪ್ಲೇಂಟ್ ಕೊಟ್ಟರೆ ನಾನು ಉತ್ತರ ಕೊಡಲಿಕ್ಕೆ ಬರುತ್ತದೆ. ಅಂದಾಜು ಮೇಲೆ ಮಾತನಾಡಬೇಕಾದರೆ ನನ್ನ ಕೈಯಲ್ಲಿ ಉತ್ತರ ಕೊಡಲು ಆಗುವುದಿಲ್ಲ.

ಛೇರ್ಮನ್:- ಮಾನ್ಯ ಕರಿಯಣ್ಣನವರೇ, ನಿಮ್ಮ ಪ್ರಶ್ನೆಗೆ ಟೈಮ್ ಕೇಳಿದ್ದಾರೆ.

ಶ್ರಿ ರಾಮಲಿಂಗ ರೆಡ್ಡಿ:- ಬೆಳಿಗ್ಗೆ ಆರೂವರೆಯಿಂದ ಒಂಭತ್ತೂವರೆಯವರೆಗೆ ಕರೆಂಟ್ ಇರುವುದಿಲ್ಲ.

ಛೇರ್ಮನ್:- ತಾವು ನೋಟೀಸ್ ಕೊಟ್ಟು ಮಾತನಾಡಿ. ಸ್ಪೆಸಿಫಿಕ್ ಆಗಿ ಕೇಳಿ. ಜನರಲ್ ಆಗಿ ಪ್ರಶ್ನೆ ಕೇಳಿದರೆ ಯಾವ ರೀತಿ ಉತ್ತರ ಕೊಡುವುದಕ್ಕಾಗುತ್ತದೆ?

ವಿಷಯ:- ನಾಗಮಂಗಲ ತಾಲ್ಲೂಕಿನಲ್ಲಿ ಹೈಟೆನ್‌ಷನ್ (ಲೈನ್) ಕೇಂದ್ರ ಸ್ಥಾಪನೆ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 426 (2121)

ಶ್ರಿ ಎಲ್. ಆರ್. ಶಿವರಾಮೇ ಗೌಡ (ನಾಗಮಂಗಲ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?